**ಕರ್ನಾಟಕ ಸರ್ಕಾರ**

**ಸಂಖ್ಯೆ**: ಜಸಂಇ (ಇ) 99 ಎಸ್ ಎ ಎಸ್ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 06.06.2022

## ಅಧಿಸೂಚನೆ

1. ಲೋಕೋಪಯೋಗಿ, ಜಲಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಅಧಿಕಾರಿ/ನೌಕರರುಗಳನ್ನು ಬೇರ್ಪಡಿಸುವುದಕ್ಕೆ ಸಂಬಂಧಿಸಿದ ಕಾರ್ಯದಲ್ಲಿ ವಿಲೀನ ಹೊಂದಲು ಆಸಕ್ತಿ ಹೊಂದಿರುವ ಅಧಿಕಾರಿ/ನೌಕರರಿಂದ ಇಚ್ಛಾ ಪತ್ರವನ್ನು ಸಲ್ಲಿಸಲು ಮೂರೂ ಇಲಾಖೆಗಳು ಪ್ರತ್ಯೇಕವಾಗಿ ಆನ್‌ಲೈನ್ ಮುಖಾಂತರ ಅವಕಾಶವನ್ನು ಕಲ್ಪಿಸಿದ್ದು, ಜಲಸಂಪನ್ಮೂಲ ಇಲಾಖೆಯಲ್ಲಿ ನಿಯೋಜನೆ / ವರ್ಗಾವಣೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಲೋಕೋಪಯೋಗಿ ಇಲಾಖೆಯ ಅಧಿಕಾರಿ / ನೌಕರರ ಸೇವೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತ ವರ್ಗಾವಣೆ ಮೂಲಕ ವಿಲೀನಗೊಳ್ಳಲು ಆಸಕ್ತ ಅಧಿಕಾರಿ/ನೌಕರರಿಂದ ಅಭಿಮತವನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ ಜಸಂಇ 06 ಸೇಎಸು 2015, ದಿನಾಂಕ: 25.11.2019 ರಲ್ಲಿ ಅವಕಾಶವನ್ನು ಕಲ್ಪಿಸಲಾಗಿತ್ತು.

2. ಅದರಂತೆ ಜಲಸಂಪನ್ಮೂಲ ಇಲಾಖೆಗೆ ವಿಲೀನಗೊಳ್ಳಲು ವಿವಿಧ ವೃಂದದ ಅಧಿಕಾರಿ/ನೌಕರರಿಂದ ಆನ್‌ಲೈನ್ ನಲ್ಲಿ ಸಲ್ಲಿಸಿದ್ದ ಅಭಿಮತವನ್ನು ಮಾತ್ರ ಪರಿಗಣಿಸಿ ಅಂತಹವರುಗಳ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 16 (ಎ) (i) ರನ್ವಯ ಲೋಕೋಪಯೋಗಿ ಇಲಾಖೆಯು ಹಾಗೂ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ ಇವರು ವಿವಿಧ ಅಧಿಸೂಚನೆಗಳಲ್ಲಿ ಜಲ ಸಂಪನ್ಮೂಲ ಇಲಾಖೆಗೆ ಶಾಶ್ವತ ವರ್ಗಾವಣೆ ಮಾಡಿದ ನಂತರ ಅವರುಗಳನ್ನು ವಿವಿಧ ಆದೇಶಗಳಲ್ಲಿ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲಾಗಿತ್ತು.

3. ಲೋಕೋಪಯೋಗಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಲೋಇ 03 ಎಸ್ ಎಸ್ ಕೆ 2022, ದಿನಾಂಕ: 31.05.2022 ರಲ್ಲಿ ಶ್ರೀ ಬಿ.ವೈ.ಪವಾರ, ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಬೆಳಗಾವಿ, ಇವರು ಜಲಸಂಪನ್ಮೂಲ ಇಲಾಖೆಗೆ ಶಾಶ್ವತವಾಗಿ ವಿಲೀನಗೊಳ್ಳಲು ಭೌತಿಕವಾಗಿ ನಮೂನೆ-1 ರಲ್ಲಿ ಸಲ್ಲಿಸಿರುವ ಇಚ್ಛಾ ಪತ್ರವನ್ನು ಪರಿಗಣಿಸಿ ಅವರನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ವಿಲೀನಗೊಳಿಸಲು ನಿರ್ಣಯಿಸಿ ಲೋಕೋಪಯೋಗಿ ಇಲಾಖೆಯ ಸಹಮತಿಯನ್ನು ನೀಡಿರುತ್ತದೆ.

4. ಶ್ರೀ ಬಿ.ವೈ.ಪವಾರ, ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಬೆಳಗಾವಿ ಇವರು ಲೋಕೋಪಯೋಗಿ ಇಲಾಖೆಗೆ ಆನ್‌ಲೈನ್ ಮುಖಾಂತರ ಇಚ್ಛಾ ಪತ್ರವನ್ನು ಸಲ್ಲಿಸಿರುತ್ತಾರೆ. ಆದರೆ, ಇವರು ಜಲಸಂಪನ್ಮೂಲ ಇಲಾಖೆಯಲ್ಲಿ ವಿಲೀನ ಹೊಂದಲು ಆನ್‌ಲೈನ್ ಮುಖಾಂತರ ಇಚ್ಛಾ ಪತ್ರವನ್ನು ಸಲ್ಲಿಸದೇ, ಈಗ ಭೌತಿಕವಾಗಿ ಸಲ್ಲಿಸಿರುತ್ತಾರೆ. ಇಲ್ಲಿಯವರೆಗೂ ಯಾವುದೇ ಭೌತಿಕ ಅಭಿಮತವನ್ನು ಪರಿಗಣಿಸಿರುವುದಿಲ್ಲ ಹಾಗೂ ಇಲಾಖಾ ಬೇರ್ಪಡಿಕೆಯಲ್ಲಿ ಭೌತಿಕವಾಗಿ ಸಲ್ಲಿಸಿರುವ ಅಭಿಮತಗಳನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿರುವುದಿಲ್ಲ.

5. ಮುಂದುವರೆದು, ಒಂದು ಇಲಾಖೆಯ ನೌಕರರ ಸೇವೆಯನ್ನು ಇನ್ನೊಂದು ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿದ್ದ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: 179 ಸೇನಿನಿ 2020, ದಿನಾಂಕ: 07.06.2021 ರಲ್ಲಿ ತಿದ್ದುಪಡಿ ತಂದು ನಿಯಮ 16(ಎ)(ii)ನ್ನು ತೆಗೆದು ಹಾಕಿರುವುದರಿಂದ, ಪ್ರಸ್ತುತ ಯಾವುದೇ ಇಲಾಖೆಯ ನೌಕರರನ್ನು ಇನ್ನೊಂದು ಇಲಾಖೆಯ ಸೇವೆಗೆ ಶಾಶ್ವತವಾಗಿ ವರ್ಗಾವಣೆಗೊಳಿಸಲು ಹಾಗೂ ವಿಲೀನ ಹೊಂದಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

6. ಅಲ್ಲದೇ, ಲೋಕೋಪಯೋಗಿ ಇಲಾಖೆಯ ಮೇಲ್ಕಂಡ ಅಧಿಸೂಚನೆಯನ್ವಯ ಶ್ರೀ ಬಿ.ವೈ.ಪವಾರ, ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ ಬೆಳಗಾವಿ ಇವರನ್ನು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಯ ಇಲಾಖೆಯ ಅಭಿಪ್ರಾಯ ಕೋರಲಾಗಿ, ಆ ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ:

***"ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯ 16 (ಎ)(ii) ಗೆ ಪ್ರಸ್ತುತ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 179 ಸೇನನಿ 2020 ದಿನಾಂಕ: 06.07.2021ರಂದು ತರಲಾದ ತಿದ್ದುಪಡಿಯಲ್ಲಿ ವರ್ಗಾವಣೆ ಮೂಲಕ ಮಾಡಲಾದ ನೇಮಕಾತಿ, ಶಾಶ್ವತ ವಿಲೀನಾತಿ ಮಾಡುವುದನ್ನು ತೆಗೆದು ಹಾಕಲಾಗಿದ್ದು, ಆದರೆ ಆಡಳಿತ ಇಲಾಖೆಯು ಕೋರಿರುವಂತೆ ವಿಲೀನಾತಿ ವಿಷಯವು ಎರಡು ಇಲಾಖೆಯ ಅಧಿಕಾರಿ/ನೌಕರರ ಬೇರ್ಪಡಿಕೆಯ ಕಾರ್ಯವಾಗಿದ್ದು, ಶ್ರೀ ಬಿ.ವೈ. ಪವಾರ್, ಅಧೀಕ್ಷಕ ಇಂಜಿನಿಯರ್,ಲೋಕೋಪಯೋಗಿ ಇಲಾಖೆ ಇವರನ್ನು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತವಾಗಿ ವಿಲೀನಗೊಳಿಸಲು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ನಿಯಮ 16 (a)(ii) ರನ್ವಯ ಆಸ್ಪದವಿರುವುದಿಲ್ಲ".***

7. ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಬಿ.ವೈ.ಪವಾರ, ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಬೆಳಗಾವಿ, ಇವರು ಜಲಸಂಪನ್ಮೂಲ ಇಲಾಖೆಗೆ ಶಾಶ್ವತವಾಗಿ ವಿಲೀನಗೊಳ್ಳಲು ಭೌತಿಕವಾಗಿ ನಮೂನೆ-1 ರಲ್ಲಿ ಸಲ್ಲಿಸಿರುವ ಇಚ್ಛಾ ಪತ್ರವನ್ನು ಪರಿಗಣಿಸಿ ಅವರ ಸೇವೆಯನ್ನು ಜಲಸಂಪನ್ಮೂಲ ಇಲಾಖೆಗೆ ವಿಲೀನಗೊಳಿಸುವ ಸಲುವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 03 ಎಸ್ ಎಸ್ ಕೆ 2022, ದಿನಾಂಕ: 31.05.2022 ರಲ್ಲಿ ಸದರಿಯವರನ್ನು ಜಲಸಂಪನ್ಮೂಲ ಇಲಾಖೆಗೆ ಶಾಶ್ವತ ವರ್ಗಾವಣೆ ಮೂಲಕ ವರ್ಗಾಯಿಸಲು ಲೋಕೋಪಯೋಗಿ ಇಲಾಖೆಯು ನೀಡಿರುವ ಸಹಮತಿಯನ್ನು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವಾದ್ದರಿಂದ ಶ್ರೀ ಬಿ.ವೈ.ಪವಾರ, ಅಧೀಕ್ಷಕ ಇಂಜಿನಿಯರ್, (ಅಧೀಕ್ಷಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇ.ಸಂ:1214, ನಿವೃತ್ತಿ ದಿನಾಂಕ: 30.06.2022) ಇವರ ಸೇವೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಮಂಜುನಾಥ ಹೆಚ್.ಎಂ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ, (ಸೇವೆಗಳು-ಎ).

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ, ಲೆಕ್ಕಪರಿಶೋಧನೆ)/ (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)/(ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿ ಲೋಕೋಪಯೋಗಿ, ಇಲಾಖೆ. ವಿಕಾಸ ಸೌಧ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದ್ ರಾವ್ ವೃತ್ತ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು.
5. ಮಾನ್ಯ ಲೋಕೋಪಯೋಗಿ ಇಲಾಖೆಯ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.

6. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನ ಸೌಧ, ಬೆಂಗಳೂರು.
7. ಹೆಚ್ಚುವರಿ ನಿರ್ದೇಶಕರು ಹಾಗೂ ಕಾರ್ಯಕಾರಿ ಮುಖ್ಯಸ್ಥರು, ಖಜಾನೆ-2, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-9.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಜಲಸಂಪನ್ಮೂಲ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
9. ಸರ್ಕಾರದ ಕಾರ್ಯದರ್ಶಿ ಜಲಸಂಪನ್ಮೂಲ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
10. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು ಜಲಸಂಪನ್ಮೂಲ ಇಲಾಖೆ (ಸೇವೆಗಳು), ವಿಕಾಸಸೌಧ, ಬೆಂಗಳೂರು.
11. ಶ್ರೀ ಬಿ.ವೈ ಪವಾರ, ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಬೆಳಗಾವಿ
12. ಶಾಖಾ ರಕ್ಷಾ ಕಡತ: ಹೆಚ್ಚುವರಿ